ಪಿತೂರಿ ಮಾಡಿ, ಆ ಪರವಾನಗಿಯ ಬಗ್ಗೆ ಚಕಾರವೆತ್ತಿ, ಆ ಮಾಲನ್ನು ಮುಟ್ಟಗೋಲು ಹಾಕಬಲ್ಲ ಶಕ್ತಿ ಆ ಕ್ಷೇತ್ರದ ಪ್ರತಿಯೊಬ್ಬರಿಗೂ ಇರುವುದರಿಂದಲೇ ನಾನು ಅಪಾಯದ ವ್ಯಾಪಾರ ಎಂದು ಮೊದಲು ಪ್ರಸ್ತಾಪಿಸಿದ್ದು. ಆ ದಿನ ಅಬ್ಬನಿಗೆ ಮರದ ವಿಚಾರದಲ್ಲಿ ಇನ್ನೊಬ್ಬರೊಂದಿಗೆ ಸಣ್ಣ ಮಾತು ಬಂದು ಹೊಯಿ-ಕೈ ನಡೆದಿತ್ತು. ಮುಂದೆ ಅವನಿಂದಾಗುವ ಅಪಾಯವನ್ನೆಲ್ಲಾ ಅಲ್ಲಿಯೇ ಮರೆತು ಇಲಾಖೆಯವರ ಅನುಮತಿ ಪಡೆದೇ ಮರವನ್ನು ಸಾಗಿಸಲು ಹೊರಟಿದ್ದರು. ಮರವನ್ನು ನದಿಯ ಕಿನಾರೆಗೆ ತಂದು ದೋಣಿಯಲ್ಲಿ ತುಂಬಿಸಿ ಬಂಟ್ವಾಳ ಬಳಿಯ ಪಾಣೆ ಮಂಗಳೂರು ಮಿಲ್‌ಗೆ ಕೊಂಡು ಹೋಗಬೇಕಿತ್ತು. ಆಗ ದೋಣಿ ನಡೆಸುತ್ತಿದ್ದುದು ಪೊಡಿಮೋನು. ಎಂದಿನಂತೆ ಆ ದಿನವೂ ಮರದ ದಿಮ್ಮಿಯನ್ನು ಪಾಣೆ ಮಂಗಳೂರಿನ ನದಿ ಕಿನಾರೆಯಲ್ಲಿ ಇನ್ನೇನು ಇಳಿಸಬೇಕು ಎನ್ನುವಷ್ಟರಲ್ಲಿ ಗಾರ್ಡ್ ಮತ್ತು ರೇಂಜರ್‌ಗಳು ದೋಣಿಯವರನ್ನು ದಸ್ತಗಿರಿ ಮಾಡಿದ್ದಲ್ಲದೆ ಎಲ್ಲಾ ಮರಗಳನ್ನು ಮುಟ್ಟಗೋಲು ಹಾಕಿಕೊಂಡರು. ಆ ಹೊತ್ತಿನಲ್ಲಿ ದೋಣಿ ನಡೆಸುತ್ತಿದ್ದ ಪೊಡಿಮೋನು ಕೂಲಿಗಾಗಿ ದೋಣಿ ನಡೆಸುವ ಕೆಲಸಕ್ಕೆ ಬಂದು ಆರೋಪಿಯಾಗಿ, ಪೊಲೀಸರ ವಶದಲ್ಲಿ ನಿಂತು ಪೆಟ್ಟು ತಿನ್ನಬೇಕಾಯಿತು. ನನ್ನ ಅಬ್ಬ ಸ್ಟೇಷನ್‌ಗೆ ಹೋಗಿ ಅವರನ್ನು ಬಿಡಿಸುವಷ್ಟರಲ್ಲಿ, ಅವರು ಸಾಕಷ್ಟು ಪೆಟ್ಟು ತಿಂದಿದ್ದರು. ಆದರೂ ಅವರು ಯಾವ ಪೂರ್ವಗ್ರಹವಿಲ್ಲದೆ ಮತ್ತೆ ಕೆಲಸಕ್ಕೆ ಹಾಜರಿರುತ್ತಿದ್ದರಂತೆ. ಆ ದಿನಗಳಲ್ಲಿ ನಾನು ಇರಲಿಲ್ಲ. ಆದರೆ ನನಗೆ ಲಿಂಗನ ಕರುಣಾಜನಕ ಪಾತ್ರವನ್ನು ಚಿತ್ರಿಸುವಾಗ ನೆನಪಾಗುವುದು ನಾನು ಕೇಳಿಸಿಕೊಂಡ ಪೊಡಿಮೋನು ಅವರ ಕಥೆ. ಪಾತ್ರಗಳು ಯಾರದೋ ಹೆಸರಿನಲ್ಲಿ ನಮ್ಮೊಳಗೆ ಬದುಕಿ ಬಿಡುವ ತಾಜಾ ಉದಾಹರಣೆಯಂದರೆ ಇದೇ.

ಊಳಿಗಮಾನ್ಯ ಪದ್ಧತಿಯ ದಿನಗಳಲ್ಲಿ, 'ತಮ್ಮದು' ಎಂಬ ಸ್ವಾರ್ಥವಿಲ್ಲದೆ ಬದುಕಿದ ಶ್ರಮಿಕ ವರ್ಗದ ಒಳ ಬೇಗುದಿ, ನಿಸ್ವಾರ್ಥ ಬದುಕು ಲಿಂಗನ ಮೂಲಕ ಈ ಕಥೆಯಲ್ಲಿ ಅಭಿವ್ಯಕ್ತವಾಗಿದೆ.

ಸುಬ್ಬಣ್ಣ ಗೌಡರ ಮನೆಯಲ್ಲಿ ಆಳಾಗಿ ದುಡಿಯುವ ಲಿಂಗ ಪ್ರಾಮಾಣಿಕ ವ್ಯಕ್ತಿ. ಆದರೆ ಸುಬ್ಬಣ್ಣ ಗೌಡರ ಮನೆಯಲ್ಲಿ ಕೆಲಸಕ್ಕೆ ಸೇರುವ ಮುನ್ನ ಅವನು ಹಿಂದೊಮ್ಮೆ ಕುಡಿದ ಮತ್ತಿನಲ್ಲಿ ಮೇಲ್ವರ್ಗದ ಮನೆಯ ಯುವಕರೊಡನೆ ದಾಂಧಲೆ ನಡೆಸಿದ ಪರಿಣಾಮ ಜೈಲು ಸೇರಬೇಕಾಯಿತು. ಅಲ್ಲಿ ಹಿಂಸೆ ಅನುಭವಿಸಬೇಕಾಯಿತು. ಅದರ ಕುರುಹು ಎಂಬಂತೆ ಅವನ ಕೈ ಕಾಲುಗಳಲ್ಲಿ ಕೋಳ ಹಾಕಿದ ಗುರುತುಗಳು ಈಗಲೂ ಇವೆ. ಅವನು ಹೀಗೆ ಎರಡು ವರ್ಷ ಜೈಲಿನಲ್ಲಿರುವಾಗಲೇ ಅವನ ಹೆಂಡತಿ ತೀರಿಕೊಂಡಳು. ಮಗನು ಅಲ್ಲಲ್ಲಿ ಅಲೆದಾಡಿ ಪರದೇಸಿಯಂತಾದ. ಜೈಲಿನಿಂದ ಹೊರಗೆ ಬಂದ ಮೇಲೆ ಬಂಧು ಬಳಗದವರಿಂದ ತಿರಸ್ಕಾರಕ್ಕೊಳಗಾದ ಲಿಂಗನಿಗೆ ಸುಬ್ಬಣ್ಣ ಗೌಡರು ಆಸರೆಯಿತ್ತು, ಗೌರವದಿಂದ ನಡೆಸಿಕೊಂಡರು. ಅದಕ್ಕಾಗಿ ಲಿಂಗನ ಮನದ ತುಂಬಾ ಗೌಡರ ಮನೆಯ ಏಳ್ಗೆಗಾಗಿ ನಿಷ್ಠೆ ಹಾಗೂ ಅವರ ಬಗ್ಗೆ ಕೃತಜ್ಞತೆಯಿದೆ.

ಕಥೆಯಲ್ಲಿ ಮಳೆಗಾಲದ ಒಂದು ದಿನ ತುಂಗಾ ನದಿ ತನ್ನ ಪಾರಮ್ಯ ತೋರುತ್ತಿದ್ದರೂ ಧಣಿಗಳು, 'ಹೊಳೆ ನೋಡಿಕೊಂಡು ಬಾ' ಎಂದು ಹೇಳಿ ಕಳುಹಿಸುವರು. ಆಗ ಸುರಿವ ಮಳೆಯಲ್ಲಿ ಅವನು ಪ್ರಾಣ ಪಣಕ್ಕಿಟ್ಟು ಓಡುತ್ತಾನೆ. ಅವನು ಸೊಟ್ಟಗೆ ನಡೆಯುವುದಕ್ಕೆ ಕಾರಣವೇನೆಂದು ಕೇಳುವಾಗ, ಉತ್ತರಿಸಲು ಹಿಂಜರಿಯುತ್ತೇನೆ. ಉಳ್ಳವರ ದರ್ಪದ ನಡವಳಿಕೆಯೇ ಅದಕ್ಕೆ ಇರುವ ಕಾರಣಗಳೆಂದು ಹೇಳಲು ಹಿಂದೇಟು ಹಾಕುತ್ತಾನೆ. ಈ ಹಿಂಜರಿಕೆಯೇ ಅವನ ಅಸಹಾಯಕತೆಯ ಸಂಕೇತವೆನಿಸುತ್ತದೆ. ತಾನು ಕುಂಟುತ್ತ ನಡೆಯುವುದಕ್ಕೆ ಯಥಾವತ್ ಕಾರಣ ಹೇಳದಿರಲು ಹೆಣಗಾಡುವ ಅವನ ಬುದ್ಧಿಯನ್ನು ಆಕ್ರಮಿಸಿದ್ದು ಜಾತಿಯ ಯಜಮಾನಿಕೆ. ಕೊನೆಗೂ ಮೌನ ಮುರಿದ ಲಿಂಗ, ತಾನು ಕುಡಿದಿದ್ದ ಅನ್ನುವ ತಪ್ಪನ್ನು ಮೊದಲೇ ಒಪ್ಪಿಕೊಂಡು ರಂಗೇ ನಾಯ್ಕನ ಜೊತೆ ಜಗಳವಾಡಿದ್ದನ್ನು ಹೇಳಿಕೊಳ್ಳುತ್ತಾನೆ. ಅವನ ಕೈಲಾಗದಿರುವಿಕೆ ಜಾತಿಯ 'ಪ್ರಿವಿಲೇಜ'ನ್ನು ಅನುಭವಿಸಿದವರ ಎದೆಗೆ ಒದೆಯುವಂತಿದೆ. ಕೊನೆಗೂ ಕಾಯುವವರು ಉಳ್ಳವರ ಜೊತೆ ನಿಲ್ಲಲೇಬೇಕಾದ ಅನಿವಾರ್ಯತೆಯನ್ನು ಹೇಳಿಕೊಳ್ಳುತ್ತಾನೆ.

ತುಂಗಾನದಿಯಲ್ಲಿ ಪ್ರವಾಹವೇರಿ, ದೋಣಿಯನ್ನು ಸಿದ್ಧಮಾಡಬೇಕೆಂದು ಹುಡುಕಿದರೆ ದೋಣಿ ಕಟ್ಟಿದ ಸ್ಥಳವೇ ಪ್ರವಾಹದಲ್ಲಿ ಮುಳುಗಿತ್ತು. ಗೌಡರು ಹೇಳದೇ